ಶ್ರೀ ಎಚ್. ಏಕಾಂತಯ್ಯ.—ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ವಿಚಾರದಲ್ಲಿ ಸರ್ಕಾರದ ನೀತಿಯನ್ನೂ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ. ಈ ಬಗ್ಗೆ ಸ್ಪಷ್ಟವಾದ ಸೂಚನೆಗಳನ್ನು ಕೂಡಿದ ಆದೇಶವನ್ನು ಸರ್ಕಾರ ತೀವ್ರವಾಗಿ ಹೊರಡಿಸಲಂ ಪರಿಶೀಲಿಸುತ್ತಿದೆ.

ರಾಜಾಜೀನಗರದಲ್ಲಿ ಕಳೆದ ಮೂರು ದಿನಗಳಿಂದ ಕುಡಿಯುವ ನೀರು ಸರಬರಾಜು ನಿಂತಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದ ರಾಜಾಜಿನಗರದಲ್ಲಿ ಕಳೆದ ಮೂರು ದಿನಗಳಿಂದ ಕುಡಿಯಲು ನೀರಿಲ್ಲದಂತಾಗಿದೆ. ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಪಂಪ್ ಕೆಟ್ಟಿದೆ ಎಂದು ಹೇಳಲಾಗಿದೆ ಆದರೆ ಜನರಿಗೆ ಬೇರೆ ವ್ಯವಸ್ಥೆ (ಟ್ಯಾಂಕರ್ ಇತ್ಯಾದಿ) ಮಾಡದೆ ಅಲ್ಲಿ ಹಾಹಾಕಾರ ವಾಗಿದೆ. ಇದರ ಬಗ್ಗೆ ನಗರಾಭಿವೃದ್ಧಿ ಸಚಿವರ ಹೇಳಿಕೆ ಅಗತ್ಯ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ತಿಪ್ಪಗೊಂಡನಹಳ್ಳಿಯಲ್ಲಿ ರಿಪೇರಿ ಕೆಲಸ ಆಗಿದೆ. ನಿನ್ನೆ ಆದು ಮುಗಿದಿದೆ. ಆದರೆ ಇನ್ನೂ ನೀರಿನ ವ್ಯವಸ್ಥೆ ಬೆಂಗಳೂರಿನಲ್ಲಿ ಸರಿಯಾಗಿ ನಡೆದಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಎಲ್ಲಿ ನೀರು ಇನ್ನೂ ಸರಿಯಾಗಿ ವಿತರಣೆ ಆಗುತ್ತಾ ಇಲ್ಲ ಅಲ್ಲಿ ಟ್ಯಾಂಕರು ಮೂಲಕ ನೀರನ್ನು ಒದಗಿಸಂವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಗಮನ ಸೆಳೆಯುವ ಸೂಚನೆ

ಪರಿಶಿಷ್ಟ ಜಾತಿ ಮತ್ತು ವರ್ಗದ ಸರ್ಕಾರಿ ಆಜ್ಞೆಯು ರೀತ್ಯಾ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯುವಲ್ಲಿ ತೊಂದರೆಯಾಗಿರುವ ಬಗ್ಗೆ.

ಶ್ರೀ ಎಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವೈದ್ಯರುಗಳಿಗೆ ಇತ್ತೀಚಿನ ಸರ್ಕಾರಿ ಆಜ್ಞೆಯ ರೀತ್ಯಾ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯುವಲ್ಲಿ ತೊಂದರೆಯಾಗಿರುವ ವಿಷಯದ ಬಗ್ಗೆ ಆರೋಗ್ಯ ಮಂತ್ರಿಯವರ ಗಮನ ವನ್ನು ಸೆಳೆಯಂತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).— ಮಾನ್ಯ ಅಧ್ಯಕ್ಷರೆ, ಈ ವರ್ಗದವರಿಗೆ ಸ್ನಾತಕೋತ್ತರ ಪದವಿಗಳಿಗೆ ಹೋಗತಕ್ಕ ವೈದ್ಯರುಗಳಿಗೆ ನಾವು ಒಂದು ಪ್ರವೇಶ ಪರೀಕ್ಷೆಯನ್ನು ಇಟ್ಟು ಆದರಲ್ಲಿ ಉತ್ತೀರ್ಣರಾಗತಕ್ಕವರಿಗೆ ೧೫ ಪರ್ಸೆಂಟ್ ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮತ್ತು ೩ ಪರ್ಸೆಂಟ್ ಪೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡಬೇಕೆಂದು ನಿಗದಿ ಮಾಡಿದ್ದೆವು. ಆದರ ಪ್ರಕಾರ ಅವರು ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳು ಬರಲಿಲ್ಲ ಆದ್ದರಿಂದ ಆ ಸ್ಥಾನ ಏನು ಖಾಲಿ ಬಿದ್ದಿತ್ತು ಅದನ್ನು ಸರ್ವೀಸ್‌ನಲ್ಲಿರತಕ್ಕ ವೈದ್ಯರ ಹೆಸರು ತೆಗೆದುಕೊಂಡು ಭರ್ತಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಎರಡನೆಯದಾಗಿ, ಸರ್ಕಾರಿ ವೈದ್ಯರುಗಳಲ್ಲಿ ಕೆಲವು ಹಂಗಾಮಿಯಾಗಿ ಕೆಲಸ ಮಾಡಿರತಕ್ಕ ವೈದ್ಯರುಗಳನ್ನು ಅಂದರೆ ಐದಾರು, ಏಳೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದವರನ್ನು ಸರ್ಕಾರ ಖಾಯಂ ಮಾಡಿದೆ. ಹೀಗೆ ಖಾಯಂ ಮಾಡಿದ್ದರೂ ಎರಡು ವರ್ಷ ಪೂರ್ವಾವಧಿ ಸೇವೆ (ಪ್ರೊಬೇಷನರ್) ಮಾಡಬೇಕೆಂಬ ಕಡ್ಡಾಯ ನಿಯಮ ಇರುವುದರಿಂದ ಅವರನ್ನು ಕೂಡ ಸೆಲೆಕ್ಟ್ ಮಾಡುವುದು ಕಷ್ಟವಾಗಿದೆ. ಆದ್ದರಿಂದ ಎರಡರ ವರ್ಷದ ನಿಯಮ ಏನಿದೆ ಅದನ್ನು ರಿಲ್ಯಾಕ್ಸ್ ಮಾಡುವುದಕ್ಕೋಸ್ಕರ ಡಿ.ಪಿ.ಎ.ಆರ್ ಗೆ ಕಳುಹಿಸಿಕೊಟ್ಟಿದ್ದೇವೆ. ಇದನ್ನು ಅತ್ಯಂತ ಸಹಾನುಭೂತಿ ಯಿಂದ ಪರಿಶೀಲಿಸಬೇಕೆಂದು ವಿಚಾರ ಮಾಡಿದ್ದೇವೆ. ಆದ್ದರಿಂದ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಇನ್ನು ಒಂದೆರಡು ದಿವಸ ಆಗಬಹುದು. ಆ ದೃಷ್ಟಿಯಿಂದ ೧೫-೧೮ ಪರ್ಸೆಂಟ್ ಏನಿದೆ ಅದಕ್ಕೆ ಕಡಿಮೆ ಇಲ್ಲದ ರೀತಿ ಯಲ್ಲಿ ಇವರಿಗೆ ಬಡ್ತಿ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಸರ್ಕಾರದ ಪರವಾಗಿ ಉತ್ತರಿಸುತ್ತೇನೆ.

ಶ್ರೀ ಎಚ್. ಕೆ. ಕಂವಾರಸ್ವಾಮಿ.—ಆಧ್ಯಕ್ಷರೇ, ೧೮ ಪರ್ಸೆಂಟ್ ಕೊಟ್ಟಿರುವುದು ಸಂತೋಷ. ಆದರೆ ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ೨-೧೦ ವರ್ಷಗಳ ಕಾಲ ಕಾಂಟ್ರಾಕ್ಟ್ ಆಧಾರದ ಮೇಲೆ ಸೇವೆ ಮಾಡಿದವರಿಗೆ ನಮ್ಮ ಸರ್ಕಾರ ಪರ್ಸೆಂಟ್ ಮಾಡಿತ್ತು. ಇಂತಹವರಿಗೆ ೧೮ ಪರ್ಸೆಂಟ್ ಕೊಡುವ ಬಗ್ಗೆ ನಾನು ಗಮನ ಸೆಳೆದಿದ್ದೇನೆ. ೨ ವರ್ಷ ಪ್ರೊಬೇಷನರಿ ಹಾಗೂ ೫ ವರ್ಷ ಅನುಭವ ಇರುವವರಿಗೆ ಆದ್ಯತೆ ಕೊಡುತ್ತಿದ್ದೀರಿ. ೮-೧೦ ವರ್ಷ ಆಗಿರುವ ಇನ್ ಸರ್ವೀಸ್ ಡಾಕ್ಟರ್ಸ್‌ಗೆ ಆದ್ಯತೆ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇರತಕ್ಕ ಕಾಯ್ದೆ ಪ್ರಕಾರ ಎಸ್.ಸಿ./ಎಸ್.ಟಿ. ಕ್ಯಾಂಡಿಡೇಟ್ಸ್ ಭರ್ತಿ ಆಗದೇ ಇದ್ದರೆ ಎರಡನೆಯದಾಗಿ ಅದನ್ನು ರಿಲ್ಯಾಕ್ಸ್ ಮಾಡಿಕೊಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ತೀವ್ರವಾಗಿ ಪರಿಗಣಿಸಿ ಅವಕಾಶ ಕೊಡುವ ಬಗ್ಗೆ ಪ್ರಯತ್ನ ಮಾಡಲಾಗುವುದು.

(2) ಜಿಲ್ಲಾ ಮಂಟ್ಪದ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡದೇ ಇರುವುದರಿಂದ ಟಿ.ಸಿ. ಹೆಚ್, ತರಬೇತಿ ಪಡೆದ ನಿರುದ್ಯೋಗಿಗಳಿಗೆ ಉಂಟಾಗಿರುವ ತೊಂದರೆ,—

ಶ್ರೀ ವೆಂಕಟರಾಮಯ್ಯ.—ಜಿಲ್ಲಾ ಮಟ್ಟದ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡದೇ ಇರುವುದರಿಂದ ಟಿ. ಸಿ. ಎಚ್. ತರಬೇತಿ ಪಡೆದ ನಿರುದ್ಯೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣದ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.—ಆಧ್ಯಕ್ಷರೇ, ಈಗಾಗಲೇ ಸ್ಥಳೀಯ ನೇಮಕಾತಿ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಇವುಗಳ ರಚನೆ ಮಾಡಿದ ಮೇಲೆ ಒಂದೂ ಸಮಿತಿಗಳೂ ಸ್ವಲ್ಪ ತಿಂಗಳ ಕಾಲ ಕೆಲಸ ಮಾಡಿಲ್ಲ. ಕೇಂದ್ರ ಸರ್ಕಾರ ಕೆಲವು ಆರ್ಥಿಕ ನಿಬಂಧನೆಗಳನ್ನು ಹಾಕಿದ ಕಾರಣ ಇವುಗಳು ಕೆಲಸ ಮಾಡುವುದಕ್ಕೆ ಆಗಲಿಲ್ಲ. ಈಗ ಶಿಕ್ಷಕರ ನೇಮಕಾತಿಯನ್ನು ಮಾಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಏನು ಖಾಲಿ ಹುದ್ದೆಗಳು ಇವೆ ಅವನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಆರ್ ವೆಂಕಟರಾಮಯ್ಯ.—ಅರ್ಜಿಗಳನ್ನು ಎಲ್ಲಾ ಜಿಲ್ಲೆಗಳಿಂದಲೂ ಕಾಲ್ಪರ್ ಮಾಡಿ ಪ್ರಾಸೆಸ್ ಕೂಡಾ ಮಾಡಿದಿರಿ. ಆದರೆ ಈಗ ಒಂದು ಆರ್ಡರನ್ನು ಆರ್ಥಿಕ ವ್ಯವಸ್ಥೆ ಎಂದು ಹೇಳಿ ಕೊಟ್ಟಿದ್ದೀರಿ. ಈಗಾಗಲೇ ೬ ತಿಂಗಳು ಹಿಂದೆಯೇ ನೇಮಕಾತಿ ಆಗಬೇಕಾಗಿತ್ತು. ಈಗ ಅನೇಕ ಶಾಲೆಗಳಲ್ಲಿ ಬೆಳಿಗ್ಗೆ ಒಂದು ಮಧ್ಯಾಹ್ನ ಒಂದು ಪಾಳಿ ಕೆಲಸ ಆಗುತ್ತಿದೆ. ಎಷ್ಟೋ ಶಾಲೆಗಳು ಒನ್ ಬೈ-ಟೂ ಶಾಲೆಗಳಾಗಿವೆ. ಕೆಲವು ಕಡೆ ಶಾಲೆಗಳನ್ನು ಸ್ಯಾಂಕ್ಷನ್ ಮಾಡಿದ್ದು ಅಲ್ಲಿ ಟೀಚರ್ಸ್ ಇಲ್ಲ. ಟೀಚರ್ಸ್ ರೆಕ್ರೂಟ್ ಆಗಿಲ್ಲ ಎಂದು ಹೇಳಿ ಕೆಲವು ಕಡೆ ಶಾಲೆಗಳೇ ಪ್ರಾರಂಭವಾಗಿಲ್ಲ. ಒಂದೆರಡು ತಿಂಗಳಿನಲ್ಲಿ ಬೇಗ ನೇಮಕಾತಿ ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಇವರು ಮಾಡುವ ಅನ್ಯಾಯದಿಂದ ಮಕ್ಕಳು ಕಾನ್ವೆಂಟ್‌ಗೆ ಹೋಗುವುದು ಪ್ರೈವೇಟ್ ಸ್ಕೂಲ್‌ಗಳಿಗೆ ಹೋಗುವುದು ಜಾಸ್ತಿಯಾಗುತ್ತಿದೆ. ಒಂದು ಸ್ಕೂಲಿನಲ್ಲಿ ಒಬ್ಬ ಉಪಾಧ್ಯಾಯರು ೮೦ ಮಕ್ಕಳನ್ನು ನೋಡಿಕೊಳ್ಳಬೇಕು. ಈ ರೀತಿಯಾದರೆ ಮಕ್ಕಳ ವಿದ್ಯಾಭ್ಯಾಸ ಯಾವರೀತಿ ಆಗಬೇಕು? ಈ ತಿಂಗಳಲ್ಲಿ ಇದನ್ನು ಮಾಡುತ್ತಾರೆಯೇ ಎಂದು ಕೇಳುತ್ತೇನೆ,

ಶ್ರೀ ಬಿ. ಸೋಮಶೇಖರ್.—ತಾವು ಹೇಳುತ್ತಿರುವುದರಲ್ಲಿ ಸಾಕಾದಷ್ಟು ಸತ್ಯವಿದೆ. ಅದರ ಬಗ್ಗೆ ಸರ್ಕಾರ ಏಂಡಿತವಾಗಿ ಗಮನವಿಟ್ಟು ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಆದಷ್ಟು ಬೇಗ ಎನ್ನುವುದು ವೇಗ್‌ಟಫರ್ಮ್, ಯಾವಾಗ ಎನ್ನುವುದನ್ನು ಒಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ಯಾವಾಗ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ.?

ಅಧ್ಯಕ್ಷರು.—ಮಾನ್ಯ ಕೊಟ್ರಪ್ಪನವರು ಇಂಥದ್ದನ್ನೆ ನೋಡಬೇಕು.

ಶ್ರೀ ಬಿ. ಜಿ. ಕೊಟ್ರಪ್ಪ.—ನಮ್ಮ ಕಮಿಟಿ ಮುಂದೆ ಆದು ಬಂದರೆ ನಾವು ನೋಡುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಎಂತಹ ಉತ್ತರಬೇಕು?